ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಖ್ಯೆ: ಉಕೃನಿ/ಕೃಭಾ/ಮಾ/2014-15

ಕೃಷಿ ನಿರ್ದೇಶನಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ: 29.10.2014

ಸುತ್ತೋಲೆ-2

ವಿಷಯ : 2014-15ನೇ ಕೃಷಿ ಭಾಗ್ಯ ಯೋಜನೆ ಹೋಬಳಿ ಮಟ್ಟದ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮದ ಮಾರ್ಗಸೂಚಿ.

ಉಲ್ಲೇಖ: 1. ಸರ್ಕಾರಿ ಆದೇಶ ಸಂ.ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22.07.2014.
2. ಕಾರ್ಯನಿರ್ವಹಣಾ ಸಮಿತಿ ಸಭೆ ನಡವಳಿ ದಿನಾಂಕ 7-8-2014.
3. ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 28-8-2014 ರಂದು ನಡೆದ ಸಭೆಯ ನಡವಳಿಗಳು.

******

ಸರ್ಕಾರಿ ಆದೇಶ ಸಂ.ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22.07.2014 ರನ್ವಯ ಕೃಷಿ ಭಾಗ್ಯ ಯೋಜನೆಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಕೃಷಿ ಭಾಗ್ಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇಲಾಖಾ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ, ಪ್ರಗತಿಪರ ರೈತರು/ರೈತ ಫಲಾನುಭವಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ. ಸದರಿ ಕಾರ್ಯಕ್ರಮದ ವೆಚ್ಚವನ್ನು ಕೃಷಿ ಉತ್ಸವ ಕಾರ್ಯಕ್ರಮಕ್ಕೆ ನೀಡಲಾಗಿರುವ ಅನುದಾನದಲ್ಲಿ ಅಥವಾ ಕೃಷಿ ಭಾಗ್ಯ ಯೋಜನೆಯಡಿ ಬಿಡುಗಡೆ ಮಾಡುವ ಅನುದಾನದಲ್ಲಿ ಭರಿಸಬಹುದಾಗಿದೆ. ಹೋಬಳಿ ಮಟ್ಟದ ಅರಿವು ಮೂಡಿಸುವ ಕಾರ್ಯಕ್ರಮದ ಘಟಕವಾರು ವೆಚ್ಚದ ವಿವರ ಈ ಕೆಳಗಿನಂತಿರುತ್ತದೆ.

ಹೋಬಳಿ ಮಟ್ಟದಲ್ಲಿ ಎಲ್ಲಾ ಪ್ರಗತಿಪರ ರೈತರು/ರೈತ ಫಲಾನುಭವಿಗಳಿಗೆ, ಜನಪ್ರತಿನಿಧಿಗಳಿಗೆ, ತರಬೇತಿಯನ್ನು ಏರ್ಪಡಿಸುವುದು. (ಗರಿಷ್ಠ 100 ಅಭ್ಯರ್ಥಿಗಳು. ಪ್ರತಿ ತರಬೇತಿಗೆ ರೂ.10,000/- ಮಾತ್ರ.)

ಘಟಕ ವಿವರ:

1. ಭೋಜನ ಮತ್ತು ರೈತರು/ರೈತ ಅನುವುಗಾರರಿಗೆ ವಾಸ್ತವಿಕ ಪ್ರಯಾಣ ವೆಚ್ಚ: ಗರಿಷ್ಠ ರೂ.7000/-
2. ತರಬೇತಿ ಸಾಮಗ್ರಿ: 2,000/-, ಸಭಾಂಗಣ ವ್ಯವಸ್ಥೆ, ಇತ್ಯಾದಿ).
3. ಇತರೆ ಪೂರಕ ವೆಚ್ಚ: 1,000/-

ಕೃಷಿ ನಿರ್ದೇಶಕರು.

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.